Ex No.18/2019
ಪಿ-ಡಬ್ಲ್ಯೂ- 01

ದಿನಾಂಕಃ 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಡಿಹೆಚ್ ಆರ್ ಗಳ ಪರ ಶ್ರೀ ಎಸ್ ಕೆ ವಕೀಲರಿಂದಃ

ನಿಪಿ 6 ನ್ನು ಬ್ಯಾಂಕಿನಿಂದ ಸಾಲ ಪಡೆಯಲು ನಾನು ಕರಾರು ಮಾಡಿದ್ದೇನೆ. ಸಾಲ ಪಡೆಯುವ ಸಂದರ್ಭಕ್ಕೆ ಬೇಕಾಗಿ ಈ ದಾಖಲೆಯನ್ನು ತಯಾರು ಮಾಡಿದ್ದೇವೆ ಎಂದರೆ ಸರಿ. ಆದಿತ್ಯ ಕ್ರೆಡಿಟ್ ಕೋಆಪರೇಟ್ ಸೊಸೈಟಿ ಈಗ್ಗೆ 3 ವರ್ಷಗಳ ಹಿಂದೆ ನಾನು ಕೆಲಸ ಮಾಡುವಾಗ ನನ್ನ ಮಾವ ಸದ್ರಿ ಸೊಸೈಟಿಗೆ ಉಪಾಧ್ಯಕ್ಷರಾಗಿದ್ದರು ಎಂದರೆ ಸರಿ . ನಾನು ಕೆಲಸಕ್ಕೆ ಸೇರುವಾಗಲೂ ಕೂಡ ನನ್ನ ಮಾವ ಉಪಾಧ್ಯಕ್ಷರಾಗಿದ್ದರು ಎಂದರೆ ಸರಿ. ಮನೆ ತೆಗೆದುಕೊಳ್ಳುವ ಸಲುವಾಗಿ ಸಾಲ ಮಾಡಲು ಟೌನ್ ಕೋ ಆಪರೇಟಿವ್ ಬ್ಯಾಂಕಿನಲ್ಲಿ ನನ್ನ ಮಾವ ಅಣ್ಣಯ್ಯ ಶೇರಿಗಾರ್ ಮಾತನಾಡಿರುತಾರೆ ಎಂದರೆ ಸರಿ. ಕ್ರಯಪತ್ರಕ್ಕೂ ಕೂಡ ನನ್ನ ಮಾವ ಅಣ್ಣಯ್ಯ ಶೇರಿಗಾರ್ ಮತ್ತು ಅತ್ತೆ ಶೋಬಾ ಶೇರಿಗಾರ್ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಾವ ಮತ್ತು ಅತ್ತೆಗೆ ಗೌರವ ಕೊಡಬೇಕು ಎನ್ನುವ ಉದ್ದೇಶದಿಂದ ಆ ಸಮಯದಲ್ಲಿ ಸಹಿ ಮಾಡಿಸಿದ್ದೇನೆ. ಕ್ರಯಪತ್ರದ ಸಮಯದಲ್ಲಿ ನನ್ನ ಗಂಡ ನನ್ನ ಜೊತೆ ಇರಲಿಲ್ಲ . ಆ ಸಮಯದಲ್ಲಿ ನಿಮ್ಮ ತಂದೆ ತಾಯಿಯ ಸಹಿ ಮಾಡಿಸಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ನಿರ್ಧಾರ ಎಂದು ತಿಳಿಸಿರುತ್ತಾರೆ. ಆಸ್ತಿಯನ್ನು ತೆಗೆದುಕೊಳ್ಳಲು ನಾನೇ ಮಾತನಾಡಿರುತ್ತೇನೆ . ಸಾಲ ತೆಗೆದುಕೊಳ್ಳುವ ಬಗ್ಗೆ ಮಾತ್ರ ನನ್ನ ಮಾವ ಮಾತನಾಡಿರುತ್ತಾರೆ. ಟೌನ್ ಕೋ ಆಪರೇಟಿವ್ ಬ್ಯಾಂಕಿನಲ್ಲಿ ನಾವು ಅಂದಾಜು 22 ಲಕ್ಷ ಸಾಲ ಪಡೆದಿದ್ದೇವೆ ನಿಗದಿತವಾಗಿ ಈಗ ನೆನಪಿಲ್ಲ. ಟೌನ್ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಎರಡು ಸಾಲದ ಖಾತೆ ಇದ್ದವು. ಉಳಿತಾಯ ಖಾತೆ ಇರಲಿಲ್ಲ. ನಾನು ಸಾಲಕ್ಕೆ ಒಮ್ಮೊಮ್ಮೆ ನಗದಿನ ರೂಪದಲ್ಲಿ, ಒಮ್ಮೊಮ್ಮೆ ನನ್ನ ಬೇರೆ ಖಾತೆಗಳಿಂದ ವರ್ಗಾವಣೆ ಮಾಡುತಿದ್ದೆ. ನಿಪಿ-4 ದಾಖಲೆಯಲ್ಲಿ ನಾನು ನಗದಿನ ರೂಪದಲ್ಲಿ ಹಣ ಕಟ್ಟಿದ ಬಗ್ಗೆ ಕಂಡುಬರುತಿಲ್ಲ. ನಿಪಿ 4 ರ ಸಾಲದ ಕಂತುಗಳನ್ನು ನಾನು ನನ್ನ ಇನ್ನೊಂದು ಖಾತೆಯಿಂದ ವರ್ಗಾವಣೆ ಮಾಡಿರುತ್ತೇನೆ. ನನ್ನ ಮತ್ತೊಂದು ಖಾತೆ ಕೆನರಾ ಬ್ಯಾಂಕ್, ಬ್ರಹ್ಮಾವರದಲ್ಲಿ ಇರುತ್ತದೆ. ಕೆನರಾ ಬ್ಯಾಂಕ್, ಬ್ರಹ್ಮಾವರದಲ್ಲಿ ಇರುವ ಖಾತೆಯ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸುತೀರಾ ಎಂದು ಕೇಳಿದ ಪ್ರಶ್ನೆಗೆ

ಸಾಕ್ಷಿ ನನಗೆ ಗೊತ್ತಾಗುತಿಲ್ಲ ಎಂದು ತಿಳಿಸಿರುತ್ತಾರೆ. ಕೆನರಾ ಬ್ಯಾಂಕ್ , ಬ್ರಹ್ಮಾವರದ ನನ್ನ ಖಾತೆಗೆ ನನ್ನ ಗಂಡ ಹಣ ಹಾಕಿ ಸದ್ರಿ ಹಣವನ್ನು ನಾನು ಈ ಸಾಲದ ಖಾತೆಗೆ ವರ್ಗಾವಣೆ ಮಾಡುತಿದ್ದೆ ಎಂದರೆ ಸರಿಯಲ್ಲ. ಸದ್ರಿ ವಿಚಾರ ಮತ್ತು ಸತ್ಯ ಗೊತ್ತಾಗುತ್ತದೆ ಎಂದು ನಾನು ಕೆನರಾ ಬ್ಯಾಂಕ್ , ಬ್ರಹ್ಮಾವರದ ಸ್ಟೇಟ್ ಮೆಂಟ್ ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 3 ಮತ್ತು 4 ಸಾಲದ ಖಾತೆಗೆ ಕೆನರಾ ಬ್ಯಾಂಕ್ , ಬ್ರಹ್ಮಾವರದ ಖಾತೆಗೆ ನನ್ನ ಗಂಡ ಹಣ ಹಾಕಿ ಅಲ್ಲಿಂದ ನಾನು ಸಾಲದ ಖಾತೆಗೆ ಹಣ ಜಮೆ ಮಾಡುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಖಾತೆ ಹೆಚ್ ಡಿ ಎಫ್ ಸಿ ಬ್ಯಾಂಕ್ , ಉಡುಪಿ ಶಾಖೆಯ ಬ್ಯಾಂಕಿನಿಂದ ನನ್ನ ಗಂಡ ನಿಮ್ಮ ಕೆನರಾ ಬ್ಯಾಂಕ್ , ಬ್ರಹ್ಮಾವರದ ಖಾತೆಗೆ RTGS ಮಾಡಿ ಸದ್ರಿ ಹಣವನ್ನು ನಾನು ಸಾಲಕ್ಕೆ ಕಟ್ಟುತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಸತ್ಯ ಗೊತ್ತಾಗುತ್ತದೆ ಎಂದು ನಾನು ನಿಪಿ 3 ಮತ್ತು 4 ಅರ್ಧ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಜಾರಿ ಅರ್ಜಿಯ ಹಣ ಕಟ್ಟಬೇಕಾಗುತ್ತದೆ ಎಂದು ಮತ್ತು ಆಸ್ತಿಗಳು attach ಆಗುತ್ತದೆ ಎಂದು ನನ್ನ ಗಂಡ ಅವರ ಹಣದಲ್ಲಿ ನನ್ನ ಹೆಸರಿನಲ್ಲಿ ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವ ಅಣ್ಣಯ್ಯ ಶೇರಿಗಾರ್ ಆದಿತ್ಯ ಕೋಆಪರೇಟ್ ಸೊಸೈಟಿಯಲ್ಲಿ ಹಣದ ಅವ್ಯವಹಾರ ಮಾಡಿದ್ದರಿಂದ ಅವರನ್ನು ಅಲ್ಲಿಂದ ಕಿತ್ತು ಹಾಕಿರುವುದರಿಂದ ನನ್ನನ್ನು ಕೂಡ ಆದಿತ್ಯ ಕೋ ಆಪರೇಟಿವ್ ಸೊಸೈಟಿಯವರು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಾರಿ ಅರ್ಜಿದಾರರ ಸೊಸೈಟಿ ಗೂ ಕೂಡ ನನ್ನ ಮಾವ ಹಣದ ಅವ್ಯವಹಾರ ಮಾಡಿ ಈಗ ಹಾಜರುಪಡಿಸಿರುವ ದಾಖಲೆಗಳ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಜಿತ್ ಶೇರಿಗಾರ್ ರವರಿಗೆ ನನ್ನ ಗಂಡ ಜಾಮೀನುದಾರರಾಗಿದ್ದರು. ಸಾಕ್ಷಿ ಮುಂದುವರಿದು ನನಗೆ ಈ ಬಗ್ಗೆ ಗೊತ್ತಿರಲಿಲ್ಲ , 2 ವರ್ಷದ ನಂತರ ಬ್ಯಾಂಕಿನಿಂದ ನೋಟಿಸು ಬಂದ ನಂತರ ಗೊತ್ತಾಯಿತು ಎಂದು ತಿಳಿಸಿರುತಾರೆ. ನಾನು ಆದಿತ್ಯ ಕೋ ಆಪರೇಟಿವ್ ಸೊಸೈಟಿ ನಲ್ಲಿ ಕೆಲಸ ಮಾಡುತಿರುವಾಗ ಅಜಿತ್ ಶೇರಿಗಾರ್ ಗೆ ಸಾಲಕ್ಕಾಗಿ ಅರ್ಜಿಯನ್ನು ನಾನೇ ಬರೆದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಜಿತ್ ಶೇರಿಗಾರ್ ಗೆ ಆದಿತ್ಯ ಕೋ ಆಪರೇಟಿವ್ ಸೊಸೈಟಿಯಲ್ಲಿ ಅರ್ಜಿಯನ್ನು ಯಾರು ಬರೆದುಕೊಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ನನ್ನ ಅತ್ತೆ ಶೋಬಾ ಶೇರಿಗಾರ್ ಗೆ ಆದಿತ್ಯ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಾಲ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಜೆರಾಕ್ಸ್ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರಲ್ಲಿ ಇರುವ ಫೊಟೋ ನೋಡಿ ಅದು ನನ್ನ ಅತ್ತೆ ಎಂದು ತಿಳಿಸಿರುತಾರೆ .

ಜೆರಾಕ್ಸ್ ಪ್ರತಿ ಆಗಿರುವುದರಿಂದ ನಿಶಾನೆಯನ್ನಾಗಿ ಮಾಡಿರುವುದಿಲ್ಲ. ಅದರಲ್ಲಿ ಇರುವ ಕೈ ಬರವಣಿಗೆ ನನ್ನದಲ್ಲ . ಅದನ್ನು ಯಾರು ಬರೆದಿರುತಾರೆ ಎಂದು ನನಗೆ ಗೊತ್ತಿಲ್ಲ . ಸಾಕ್ಷಿ ಮುಂದುವರಿದು ನಾನು ಆ ಶಾಖೆಯಲ್ಲಿ ಇರಲಿಲ್ಲ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಒಂದು ಫೊಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಸದ್ರಿ ಫೊಟೋದಲ್ಲಿ ಕಾಣಿಸಿರುವ ವ್ಯಕ್ತಿ ನನ್ನ ಗಂಡ ಅನಿಲ್ ಶೇರಿಗಾರ್ ಎಂದು ತಿಳಿಸಿ ಪುನಃ ನಂತರ ಅದನ್ನು ಎಡಿಟ್ ಮಾಡಿರಬಹುದು ಎಂದು ತಿಳಿಸಿರುತ್ತಾರೆ . ಸದ್ರಿ ಫೊಟೋದಲ್ಲಿ ಕಾಣುವ ಮತ್ತೊಬ್ಬ ಹುಡುಗಿ ನನ್ನ ಮಗಳು ಎಂದರೆ ಸರಿ . ಸದ್ರಿ ಫೊಟೋ ತೆಗೆಯುವಾಗ ನನ್ನ ಮಗಳಿಗೆ 12 ವರ್ಷ ಎಂದರೆ ನನಗೆ ಗೊತ್ತಿಲ್ಲ . ಜಾರಿ ಅರ್ಜಿಯ ಡಿಕ್ರಿ ಹೋಲ್ಡರ್ ರವರಿಗೆ ಮೋಸ ಮಾಡಬೇಕು ಎನ್ನುವ ಉದ್ದೇಶದಿಂದ ನನ್ನ ಗಂಡ ನನ್ನ ಹೆಸರಿನಲ್ಲಿ ಜಾರಿ ಡಿಕ್ರಿ ಹೋಲ್ಡರ್ ರವರ ಸೊಸೈಟಿಯಿಂದ ಪಡೆದ ಸಾಲದಿಂದ ನನ್ನ ಹೆಸರಿನಲ್ಲಿ ಆಸ್ತಿ ಖರೀದಿಸಿರುತಾರೆ ಎಂದರೆ ಸರಿಯಲ್ಲ . ಅರ್ಜಿದಾರರ ಸಾಲಕ್ಕೆ ನನ್ನ ಹೆಸರಿನಲ್ಲಿ ಖರೀದಿಸಿರುವ ಮನೆಗಳು ಬದ್ಧಪಡುತ್ತದೆ ಎಂದರೆ ಸರಿಯಲ್ಲ . ಮೋಸ ಮತ್ತು ವಂಚನೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.